ಯೋಚಿಸುತ್ತಿದ್ದ ಸಂದೀಪನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ ಅರಿಹಂತ 'ಸೆಕೆಂಡ್ ಸೆಮಿಸ್ಟರ್ ಮುಗ್ಯೋಕೆ ಇನ್ನೂ ಮೂರ್ ತಿಂಗ್ಳು ಇದೆ, ಅಲ್ಲೀವರೆಗೆ ಡೈಲಿ ನೀನೇ ಒಲೆ ಉರಿ ಹಾಕ್ಬೇಕು. ಇವ್ನನ್ನ ಬಿಟ್ಟು ಯಾವ್ದೋನಾದ್ರೂ ಕಾಯಿಮೊಟ್ಟೆಗ್ ಕೈ ಹಾಕಿದ್ ಕಾಣ್ಸಿದ್ರೆ ಪನಿಶ್ಮೆಂಟ್ ಇದಕ್ಕಿಂತ ವರ್ಸ್ಟ್ ಆಗಿರುತ್ತೆ' ಎಂದು ಹೈಕೋರ್ಟ್ ಜಡ್ಜಿನಂತೆ ತೀರ್ಪನ್ನು ಒಗಾಯಿಸಿದ. ಸೀನಿಯರುಗಳು, ಜ್ಯೂನಿಯರುಗಳು ಎಲ್ಲರಿಗೂ ಒಮ್ಮೆ ಸಂದೀಪನ ಕಡೆಗೆ ಅಯ್ಯೋ ಪಾಪ ಎನ್ನುವಂತಹ ನೋಟ ಬೀರುವುದು ಬಿಟ್ಟು ಬೇರೆ ದಾರಿಯಿರಲಿಲ್ಲ. ಕಿರೇಮಗಳೂರಿನ ಕರುಳು ಕೊರೆಯುವ ಚಳಿಗೆ ಪ್ರತೀ ದಿನ ಬೆಳಗ್ಗೆ ನಾಲ್ಕು ಗಂಟೆಗೆ ಏಳಬೇಕಾದ ಗತಿಯನ್ನು ನೆನೆಸಿಕೊಂಡು ಸಂದೀಪ ನಿಂತಲ್ಲೇ ಒಮ್ಮೆ ಕನಲಿದ.

ಫೇರ್‌ವೆಲ್ ಡೇ ಚೆನ್ನಾಗಿಯೇ ನಡೆಯಿತು. ಟ್ರೆಶರ್ ಹಂಟು, ಕ್ರಿಕೆಟ್ಟು, ಡಂಶರಟ್ಸು, ಅಂತ್ಯಾಕ್ಷರಿ ಎಲ್ಲವನ್ನೂ ಆಡಿಸಿ, ಭರ್ಜರಿಯಾಗಿ ಊಟ ಮಾಡಿ, ಸೀನಿಯರುಗಳಿಗೆಲ್ಲಾ ಹಾಸ್ಟೆಲಿನ ಭಾವಚಿತ್ರವನ್ನು ಇಂಪೋಸ್ ಮಾಡಿರುವ ಕಾಫಿ ಕಪ್ ಗಿಫ್ಟ್ ಕೊಟ್ಟಿದ್ದಾಯಿತು. ಸಂದೀಪನ ದೃಷ್ಟಿ ಮಾತ್ರ ಅರಿಹಂತನ ಕಡೆಗೇ ನೆಟ್ಟಿತ್ತು. ಹೆಜ್ಜೆಯಿಡುವ ನೆಲವನ್ನೂ ಹೆದರಿಸಿ ತನ್ನ ಸುಪರ್ದಿಗೆ ತೆಗೆದುಕೊಳ್ಳುವಷ್ಟು ಪ್ರಖರನಾಗಿದ್ದ ಅರಿಹಂತ ಮಾರ್ಕ್ಸ್ ಕಾರ್ಡು ಕಳೆದಾಗಿನಿಂದ ಮಾತ್ರ ಗಾಳಿಗಿಟ್ಟ ಬಿಸ್ಕೆಟ್ಟಿನಂತೆ ಮೆದುವಾಗಿಬಿಟ್ಟಿದ್ದ. ಏಳನೇ ಸೆಮಿಸ್ಟರಿನಲ್ಲಿ ಕ್ಯಾಂಪಸ್ ಸೆಲೆಕ್ಷನ್ ಶುರುವಾದ ಆರಂಭದಲ್ಲಿಯೇ ಅತ್ಯಂತ ಒಳ್ಳೆಯ ಕಂಪನಿಯೊಂದರಲ್ಲಿ ಕೆಲಸ ಗಿಟ್ಟಿಸಿದ್ದ ಅರಿಹಂತ ಇತರ ಸೀನಿಯರುಗಳಿಗೆ ಹೇಗೆ ಇಂಟರ್ ನೀಡಿದ್ದರು. ಕಂಪನಿಯ ತರಬೇತಿ ಶುರುವಾಗುವ ಮುನ್ನ ಆರನೇ ಸೆಮಿಸ್ಟರಿನ ಅಸಲಿ ಅಂಕಪಟ್ಟಿಯನ್ನು ಸಲ್ಲಿಸದಿದ್ದರೆ ನೇಮಕಾತಿಯನ್ನು ತಡೆ ಹಿಡಿಯುವ ಸಾಧ್ಯತೆಯಿತ್ತು. ಆರನೇ ಸೆಮಿಸ್ಟರ್ ಅಂಕಪಟ್ಟಿ ಬಂದು, ಇನ್ನೇನು ಇತರೆ ಅಂಕಪಟ್ಟಿಗಳ ಜೊತೆಗೆ ಅದನ್ನೂ ಸೇರಿಸಿ ಕಂಪನಿಯ ಬೆಂಗಳೂರಿನ ಶಾಖೆಗೆ ಸಲ್ಲಿಸಿ, ಎಂಟನೇ ಸೆಮಿಸ್ಟರ್ ಪರೀಕ್ಷೆ ಬರೆದು ದೆಹಲಿಗೆ ವಿಮಾನ ಹತ್ತಬೇಕೆಂದಿದ್ದ ಅರಿಹಂತನ ಜೀವನವೇ ತಲೆ ಕೆಳಗಾಗುವಂತೆ ಟೇಬಲ್ ಮೇಲಿಟ್ಟಿದ್ದ ಅವನ ಅಂಕಪಟ್ಟಿ ಕಾಣೆಯಾಗಿತ್ತು. ಇನ್ನೇನು ಫೇರ್‌ವೆಲ್ ಮುಗಿದು ಮೂರೇ ದಿನಕ್ಕೆ ಪರೀಕ್ಷೆ ಶುರುವಾಗುತ್ತದೆ. ಅದಕ್ಕೆ ಓದಲೂ ಮನಸ್ಸಿಲ್ಲದಂತೆ ಅರಿಹಂತ ಮಂಕಾಗಿರುವುದನ್ನು ಸೀನಿಯರುಗಳಿರಲಿ, ಸ್ವತಃ ಸಂದೀಪನಿಗೇ ನೋಡಲಾಗುತ್ತಿರಲಿಲ್ಲ. ಫೇರ್‌ವೆಲ್‌ನ ಕೊನೆಯ ಭಾಗವೆಂದರೆ ಹಾಸ್ಟೆಲ್ ಬಿಟ್ಟು ಹೋಗುತ್ತಿರುವ ಅಂತಿಮ ವರ್ಷದವರ ಮಾತು. ಸುತ್ತಲೂ ವೃತ್ತಾಕಾರವಾಗಿ ಕೂತಿರುವ ಹುಡುಗರ ಮಧ್ಯೆ ಚೇರು ಹಾಕಿಕೊಂಡು ಕೂತ ಅರಿಹಂತ ಮಾಮೂಲಿ ಧ್ವನಿಯಲ್ಲಿಯೇ ಮಾತನ್ನು ಶುರು ಮಾಡಿದ. ಹಾಸ್ಟೆಲ್ ಅಂದ್ರೆ ಒಂದು ಆಲದಮರ ಇದ್ದಂಗೆ. ನಾವೆಲ್ಲಾರೂ ನಾಕ್ ನಾಕ್ ವರ್ಷ ಇದರ ನೆರಳಲ್ಲಿ ಕೂತು ಎದ್ದು ಹೋಗ್ತೀವಿ. ನಾವ್ ಹೋದ್ರೂ ಹಾಸ್ಟೆಲ್ ಮಾತ್ರ ಹಂಗೇ ಇರುತ್ತೆ ಎಂದು ಹೇಳುತ್ತಾ ನಿಧಾನಕ್ಕೆ ಅವನ ಧ್ವನಿ ಕಂಪಿಸಲು ಶುರುವಾಯಿತು. ನಾನು ತುಂಬಾ ರಫ್ಫಾಗಿ ಮಾತಾಡ್ತೀನಿ, ಸಿಟ್ ಮಾಡ್ಕೊಂಡಿರ್ತೀನಿ ಅಂತ ನನ್ ಬಗ್ಗೆ ಸುಮಾರ್ ಜನಕ್ಕೆ ಬೇಜಾರಿರ್ಬೋದು. ಅದೇ ಬೇಜಾರಲ್ಲಿ ಯಾರೋ ಶಾಪ ಹಾಕಿದಾರೆ ಅಂತ ಕಾಣುತ್ತೆ ಎಂದು ಹೇಳಿ ಗಂಟಲು ಕಟ್ಟಿದಂತಾಗಿ ಮಾತು ನಿಲ್ಲಿಸಿದ. ಅವನತ್ತಲೇ ನೋಡುತ್ತಿದ್ದ ಸಂದೀಪನಿಗೆ ಅವನು ಕೂತಿದ್ದ ಕುರ್ಚಿಯಿಂದ ಸ್ವಲ್ಪ ದೂರದಲ್ಲಿ ಕರಿ ಬೆಕ್ಕು ಕೂತಿರುವುದು ಕಾಣಿಸಿತು. ಅವನ ಗಾಯ ಮತ್ತೆ ನೋಯಲು ಶುರುವಾಯಿತು. ಕರಿ ಬೆಕ್ಕು ನನ್ನತ್ತಲೇ ನೋಡುತ್ತಿದೆ ಎಂದು ಅವನಿಗೆ ಸ್ಪಷ್ಟವಾಯಿತು. ಮುಂದೆ ಮಾತು ಮುಂದುವರಿಸಲಾಗದೇ ಅರಿಹಂತ ಒದ್ದಾಡುತ್ತಿರುವುದನ್ನು ನೋಡಿ ಶಂಕರ 'ಗ್ರೂಪ್ ಫೋಟೋ ತೆಗೆಸ್ಕೊಂಡುಬಿಡೋಣ ಬನ್ರೋ' ಎಂದು ಎಲ್ಲರನ್ನೂ ಕೂತಲ್ಲಿಂದ ಏಳುವಂತೆ ಮಾಡಿದ. ಸಂದೀಪನ ಕಣ್ಣು ಮಾತ್ರ ಕರಿ ಬೆಕ್ಕಿನ ಮೇಲೆಯೇ ಇತ್ತು. ಹಾಸ್ಟೆಲ್ಲೆಂಬ ಆಲದಮರದ ಕೆಳಗೆ ಸದ್ಯಕ್ಕೆ ನೆರಳು ಪಡೆಯುತ್ತಿರುವ ಐವತ್ತು ಸಂತಾನಗಳೂ ಫೋಟೋಗೆಂದು ಒಂದೇ ಫ್ರೇಮಿನಲ್ಲಿ ಬಂದು ಸೇರಿದವು. ಕ್ಯಾಮೆರಾ ಹಿಡಿದಿದ್ದ ಶಂಕರನ ಹಿಂದೆಯೇ ಸ್ವಲ್ಪ ದೂರದಲ್ಲಿ ಕರಿ ಬೆಕ್ಕು ಬಂದು ಬಾಲವನ್ನು ಲಾಲಿತ್ಯದಿಂದ ಆಡಿಸುತ್ತಾ ಕುಳಿತಿರುವುದನ್ನು ಸಂದೀಪ ನೋಡಿದ. ಬೆಕ್ಕು ಕೂಡಾ ಸಂದೀಪನತ್ತಲೇ ನೋಡುತ್ತಿತ್ತು. 'ಏ ಕಡ್ಡಿ ಪೈಲ್ವಾನ್ ಸೈಡಿಗೇನ್ ನೋಡ್ತೀಯಾ... ಕ್ಯಾಮೆರಾ ಕಡೆ ನೋಡು' ಎಂದು ಶಂಕರ ಗದರಿದಾಗ ಸಂದೀಪ ಇತ್ತ ತಿರುಗಿದ.